ಎಂ ವಿ ಸಿ ನಂ. 216/2022
ಪಿ ಡಬ್ಲ್ಯೂ: 1
ದಿನಾಂಕ 17-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: **2** ನೇ ಎದುರುದಾರರ ಪರ: ಶ್ರೀ ಸಿ ಜೆ ಎಂ ವಕೀಲರಿಂದ:

ಅಪಘಾತವಾದ ದಿನ ನನ್ನ ಟಿ ವಿ ಎಸ್ ಮೊಪೆಟ್ ನಲ್ಲಿ ನಾನೇ ಚಾಲನೆ ಮಾಡಿಕೊಂಡು ಹೋಗುತ್ತಿದ್ದೇನು. ನನಗೆ ಟಿ ವಿ ಎಸ್ ಮೊಪೆಟ್ ಚಾಲನೆ ಮಾಡಲು ಚಾಲನಾ ಪರವಾನಿಗಿ ಇರುತ್ತದೆ. ಅದನ್ನು ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಂತಹ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಚಾಲನಾ ಪರವಾನಿಗಿ ಇಲ್ಲದೆ ಇರುವುದರಿಂದಲೇ ಆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವು **1** ನೇ ಎದುರುದಾರರ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನನಗೆ ಚಾಲನಾ ಪರವಾನಿಗಿ ಇಲ್ಲದೆ ಇರುವುದರಿಂದ ಪೋಲೀಸರು ಜತೆ ಷರೀಕ್ಕಾಗಿ ನನ್ನ ತಪ್ಪಿನಿಂದ ಅಪಘಾತವಾಗಿದ್ದರೂ ಸಹ **1** ನೇ ಎದುರುದಾರರ ವಿರುದ್ಧ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವಾದ **9** ದಿನಗಳು ತಡವಾಗಿ ಕೆಎ-**18** ಜಡ್-**8052** ರ ಕಾರನ್ನು ಸೇರಿಸಿ **1** ನೇ ಎದುರುದಾರರ ಮೇಲೆ ಸುಳ್ಳು ಪ್ರಕರಣ ದಾಖಲಿಸಲಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಅಪಘಾತವಾಗಿದ್ದು ಕಾಲಿನ ಶಸ್ತ್ರ ಚಿಕಿತ್ಸೆ ಸಹ ಆಗಿದೆ ಎಂದು ನುಡಿಯುತ್ತಾರೆ. ಅಪಘಾತದಿಂದ ನನಗೆ ಆದ ಗಾಯಗಳು ಸಂಪೂರ್ಣವಾಗಿ ಗುಣವಾಗಿದೆ ಎಂದರೆ ಸಾಕ್ಷಿ ನಾನು ಈಗಲೂ ಸಹ ಮಾಸಿಕ **4-5** ಸಾವಿರ ಮೊತ್ತದ ಮಾತ್ರೆಗಳನ್ನು ನುಂಗುತ್ತಿದ್ದೇನೆ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲೆಗಳನ್ನು ಸಹ

ಹಾಜರುಪಡಿಸಿರುತ್ತೇನೆ. ನಾನು ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ಯಾವುದೇ ದಾಖಲೆ ಇಲ್ಲದೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮಾಸಿಕ 30 ಸಾವಿರ ರೂ ಆದಾಯ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡುತ್ತೇನೆ, ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನೆ. ನನ್ನ ತಪ್ಪಿನಿಂದಲೇ ಅಪಘಾತವಾಗಿರುವುದರಿಂದ 2 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ನೇ ಎದುರುದಾರರ ಪರಃ ಶ್ರೀ ಕೆ ಆರ್ ವಕೀಲರಿಂದಃ

1 ನೇ ಎದುರುದಾರರ ಪರ ವಕೀಲರು ಹಾಜರಿದ್ದು, 2 ನೇ ಎದುರುದಾರರ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನೆ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.

ಪಾಟೀ ಸವಾಲುಃ 3 ನೇ ಎದುರುದಾರರ ಪರಃ ಶ್ರೀ ಸಿ ಒ ವೈ ವಕೀಲರಿಂದಃ

ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.